**03/10/24** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ರಾವಣನ ಕಾಯಿದೆಯಾಗಿದೆ ಅಸುರಿಮತ, ಸುಳ್ಳು ಹೇಳುವುದು, ತಂದೆಯ ಕಾಯಿದೆಯಾಗಿದೆ- ಶ್ರೀಮತ, ಸತ್ಯ ಹೇಳುವುದು"

ಪ್ರಶ್ನೆ: ಯಾವ ಮಾತುಗಳ ವಿಚಾರವನ್ನು ಮಾಡಿ ಮಕ್ಕಳಿಗೆ ಆಶ್ಚರ್ಯವಾಗಬೇಕು

ಉತ್ತರ: 1. ಇದು ಎಂತಹ ಬೇಹದ್ದಿನ ಆಶ್ಚರ್ಯಕ ನಾಟಕವಾಗಿದೆ. ಯಾವ ಕ್ಷಣದಲ್ಲಿ ಯಾವ ಪಾತ್ರ ನಡೆದಿದೆಯೋ ಅದು ಪುನರಾವರ್ತನೆಯಾಗುತ್ತದೆ. ಎಷ್ಟು ಆಶ್ಚರ್ಯವಾಗುತ್ತದೆ, ಒಬ್ಬರ ಲಕ್ಷಣಗಳು ಇನ್ನೊಬ್ಬರಿಗೆ ಹೋಲಿಕೆ ಆಗುವುದಿಲ್ಲ. 2. ಹೇಗೆ ಬೇಹದ್ದಿನ ತಂದೆಯು ಬಂದು ಇಡೀ ವಿಶ್ವದವರ ಸದ್ಗತಿಯನ್ನು ಮಾಡುತ್ತಾರೆ, ಓದಿಸುತ್ತಾರೆ, ಇದೂ ಸಹ ಆಶ್ಚರ್ಯವಾಗಿದೆ.

ಓಂ ಶಾಂತಿ. ಆತ್ಮೀಯ ತಂದೆ ಶಿವ ಕುಳಿತು ತಮ್ಮ ಆತ್ಮೀಯ ಮಕ್ಕಳಾದ ಸಾಲಿಗ್ರಾಮಗಳಿಗೆ ತಿಳಿಸುತ್ತಿದ್ದಾರೆ. ಏನು ತಿಳಿಸುತ್ತಿದ್ದಾರೆ? ಸೃಷ್ಟಿಯ ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ತಿಳಿಸುತ್ತಾರೆ ಎಲ್ಲರಿಗೂ ಅವರವರ ಶರೀರದ ಹೆಸರಿದೆ. ಬಾಕಿ ಒಬ್ಬರೇ ಪರಮಾತ್ಮನಾಗಿದ್ದಾರೆ. ಅವರಿಗೆ ಶರೀರವಿಲ್ಲ. ಆ ಪರಮಾತ್ಮನ ಹೆಸರು ಶಿವ ಆಗಿದೆ, ಅವರಿಗೆ ಪತಿತ-ಪಾವನ, ಪರಮಾತ್ಮ ಎಂದು ಹೇಳಲಾಗುತ್ತದೆ. ತಂದೆಯವರು ನೀವು ಮಕ್ಕಳಿಗೆ ಇಡೀ ವಿಶ್ವದ ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ತಿಳಿಸುತ್ತಿದ್ದಾರೆ. ಪಾತ್ರವನ್ನು ಅಭಿನಯ ಮಾಡಲು ಎಲ್ಲರೂ ಇಲ್ಲಿಗೆ ಬರುತ್ತಾರೆ. ಇದನ್ನೂ ತಿಳಿಸಲಾಗಿದೆ ವಿಷ್ಣುವಿಗೆ ಎರಡು ರೂಪವಿದೆ. ಶಂಕರನಿಗೆ ಯಾವುದೇ ಪಾತ್ರವಿಲ್ಲ. ಇವೆಲ್ಲವೂ ತಂದೆಯು ಕುಳಿತು ತಿಳಿಸುತ್ತಾರೆ. ತಂದೆಯು ಯಾವಾಗ ಬರುತ್ತಾರೆ? ಹೊಸಸೃಷ್ಟಿಯ ಸ್ಥಾಪನೆಯಾಗುತ್ತದೆ ಮತ್ತು ಹಳೆಯ ಸೃಷ್ಟಿಯ ವಿನಾಶವಾಗುತ್ತದೆ. ಮಕ್ಕಳಿಗೆ ತಿಳಿದಿದೆ- ಹೊಸಪ್ರಪಂಚದಲ್ಲಿ ಒಂದೇ ಆದಿಸನಾತನ ದೇವಿ-ದೇವತಾ ಧರ್ಮದ ಸ್ಥಾಪನೆಯಾಗುತ್ತದೆ. ಅದನ್ನು ಪರಮಪಿತ ಪರಮಾತ್ಮನ ವಿನಃ ಮತ್ತ್ಯಾರೂ ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಒಬ್ಬ ಪರಮ ಆತ್ಮನಿಗೆ ಪರಮಾತ್ಮನೆಂದು ಹೇಳಲಾಗುತ್ತದೆ, ಹೆಸರು ಶಿವ ಎಂದಾಗಿದೆ, ಅವರಿಗೆ ಶರೀರದ ಹೆಸರು ಇರುವುದಿಲ್ಲ. ಬಾಕಿ ಯಾರೆಲ್ಲಾ ಇದ್ದಾರೆಯೋ ಅವರಿಗೆ ಶರೀರದ ಹೆಸರು ಇರುತ್ತದೆ. ಇದೂ ಸಹ ಗೊತ್ತಿದೆ. ಮುಖ್ಯ-ಮುಖ್ಯವಾಗಿ ಯಾರೆಲ್ಲಾ ಇದ್ದಾರೆಯೋ ಅವರೆಲ್ಲಾ ಬಂದುಬಿಟ್ಟಿದ್ದಾರೆ. ಡ್ರಾಮಾದ ಚಕ್ರವು ಸುತ್ತುತ್ತಾ-ಸುತ್ತುತ್ತಾ ಈಗ ಅಂತ್ಯವನ್ನು ಬಂದು ತಲುಪಿದೆ. ಅಂತ್ಯದಲ್ಲಿ ತಂದೆಯೇ ಬೇಕಾಗುತ್ತಾರೆ. ಅವರ ಜಯಂತಿಯನ್ನು ಆಚರಿಸುತ್ತಾರೆ. ಯಾವಾಗ ಪ್ರಪಂಚ ಪರಿವರ್ತನೆ ಆಗಬೇಕೋ ಆಗ ಶಿವಜಯಂತಿ ಆಚರಣೆ ಮಾಡುತ್ತಾರೆ. ಘೋರ ಅಂಧಕಾರದಿಂದ ಘೋರ ಪ್ರಕಾಶ ಬರುತ್ತದೆ ಅರ್ಥಾತ್ ದುಃಖಧಾಮದಿಂದ ಸುಖಧಾಮ ಬರಲಿದೆ. ಮಕ್ಕಳಿಗೆ ಪರಮಪಿತ ಪರಮಾತ್ಮ ಶಿವ ಒಂದೇಬಾರಿ ಪುರುಷೋತ್ತಮ ಸಂಗಮಯುಗದಲ್ಲಿ ಬರುತ್ತಾರೆ ಎಂದು ತಿಳಿದಿದೆ. ಹಳೆಯ ಪ್ರಪಂಚದ ವಿನಾಶ, ಹೊಸಪ್ರಪಂಚದ ಸ್ಥಾಪನೆ, ಮೊದಲು ಹೊಸಪ್ರಪಂಚದ ಸ್ಥಾಪನೆ, ಹಳೆಯ ಪ್ರಪಂಚದ ವಿನಾಶವಾಗುತ್ತದೆ. ವಿದ್ಯೆಯನ್ನು ಓದಿ ಬುದ್ಧಿವಂತರಾಗಬೇಕು ಮತ್ತೆ ದೈವೀಗುಣಗಳನ್ನು ಧಾರಣೆ ಮಾಡಬೇಕು ಎಂದು ಮಕ್ಕಳಿಗೆ ತಿಳಿದಿದೆ. ಆಸುರೀಗುಣಗಳನ್ನು ತೆಗೆದುಹಾಕಬೇಕು. ದೈವೀಗುಣ ಮತ್ತು ಆಸುರೀಗುಣಗಳ ವರ್ಣನೆಯ ಚಾರ್ಟನ್ನು ತೋರಿಸಬೇಕು. ತಮ್ಮನ್ನು ತಾವೇ ನೋಡಿಕೊಳ್ಳಿ- ನಾವು ಯಾರಿಗೂ ಬೇಸರಪಡಿಸುವುದಿಲ್ಲವೆ? ಸುಳ್ಳನ್ನು ಹೇಳುವುದಿಲ್ಲವೆ? ಶ್ರೀಮತಕ್ಕೆ ವಿರುದ್ಧವಾಗಿ ನಡೆಯುತ್ತಿಲ್ಲವೆ? ಸುಳ್ಳು ಹೇಳುವುದು, ಯಾರಿಗಾದರೂ ದುಃಖ ಕೊಡುವುದು, ಬೇಸರಪಡಿಸುವುದು- ಇದು ರಾವಣನ ಕಾಯಿದೆಯಾಗಿದೆ. ಮತ್ತು ಸತ್ಯ ಹೇಳುವುದು ರಾಮನ ಕಾಯಿದೆಯಾಗಿದೆ. ರಾವಣನ ಮತದಿಂದ ಮನುಷ್ಯರು ಅಸುರರು, ದುಃಖಿ ಮತ್ತು ರೋಗಿಗಳಾಗುತ್ತಾರೆ. 5 ವಿಕಾರಗಳ ಪ್ರವೇಶತೆ ಆಗುತ್ತದೆ. ತಂದೆಯು ಬಂದು ಶ್ರೀಮತವನ್ನು ಕೊಡುತ್ತಾರೆ. ಮಕ್ಕಳಿಗೆ ಗೊತ್ತಿದೆ- ಶ್ರೀಮತದಿಂದ ದೈವೀಗುಣಗಳು ಬರುತ್ತದೆ. ಆಸುರೀಗುಣಗಳನ್ನು ಪರಿವರ್ತನೆ ಮಾಡಿಕೊಳ್ಳಬೇಕು. ಒಂದುವೇಳೆ ಅಸುರಿಗುಣ ಉಳಿದರೆ ಪದವಿ ಕಡಿಮೆಯಾಗುತ್ತದೆ. ಜನ್ಮ-ಜನ್ಮಾಂತರದ ಪಾಪದ ಹೊರೆ ತಲೆಯ ಮೇಲಿದೆ. ನಂಬರ್ವಾರ್ ಪುರುಷಾರ್ಥದನುಸಾರ ಹಗುರವಾಗಿಬಿಡುತ್ತದೆ. ಇದು ಪುರುಷೋತ್ತಮ ಸಂಗಮಯುಗವಾಗಿದೆ ಎಂದೂ ಸಹ ತಿಳಿದಿದೆ. ತಂದೆಯ ಮುಖಾಂತರ ಈಗ ದೈವೀಗುಣಗಳ ಧಾರಣೆ ಮಾಡಿ ಹೊಸಪ್ರಪಂಚಕ್ಕೆ ಮಾಲೀಕರಾಗುತ್ತೇವೆ. ಅಂದಮೇಲೆ ಹಳೆಯ ಪ್ರಪಂಚದ ವಿನಾಶವಾಗಲಿದೆ ಎಂದು ಸಿದ್ಧವಾಗುತ್ತದೆ. ಹೊಸಪ್ರಪಂಚದ ಸ್ಥಾಪನೆ ಬ್ರಹ್ಮಾಕುಮಾರ-ಕುಮಾರಿಯರ ಮುಖಾಂತರ ಆಗುತ್ತದೆ. ಪೂರ್ಣ ನಿಶ್ಚಯವಿರುವ ಕಾರಣ ಸೇವೆಯಲ್ಲಿ ತೊಡಗಿದ್ದೇವೆ. ಅನೇಕರ ಕಲ್ಯಾಣವನ್ನು ಮಾಡುವುದಕ್ಕೆ ಪರಿಶ್ರಮಪಡುತ್ತಾ ಇರುತ್ತೇವೆ.

ತಮಗೆ ಗೊತ್ತಿದೆ- ನಮ್ಮ ಸಹೋದರ-ಸಹೋದರಿಯರು ಎಷ್ಟು ಸೇವೆಯನ್ನು ಮಾಡುತ್ತಾರೆ. ಎಲ್ಲರಿಗೆ ತಂದೆಯ ಪರಿಚಯವನ್ನು ಕೊಡುತ್ತಿರುತ್ತಾರೆ. ತಂದೆಯು ಬಂದಿದ್ದಾರೆ ಎಂಬುದನ್ನು ಮೊದಲು ಕೆಲವರು ಮಾತ್ರ ತಿಳಿದುಕೊಳ್ಳುತ್ತಾರೆ ನಂತರ ವೃದ್ಧಿಯಾಗುತ್ತದೆ. ಒಬ್ಬ ಬ್ರಹ್ಮಾನ ಮುಖಾಂತರ ಅನೇಕ ಬ್ರಹ್ಮಾಕುಮಾರರಾಗುತ್ತಾರೆ. ಬ್ರಾಹ್ಮಣಕುಲ ಅವಶ್ಯವಾಗಿ ಬೇಕಲ್ಲವೆ. ತಮಗೆ ಗೊತ್ತಿದೆ- ನಾವು ಎಲ್ಲಾ ಬ್ರಹ್ಮಾಕುಮಾರ-ಕುಮಾರಿಯರು ಶಿವತಂದೆಯ ಮಕ್ಕಳು, ಸಹೋದರ-ಸಹೋದರರಾಗಿದ್ದೇವೆ.

ವಾಸ್ತವದಲ್ಲಿ ಸಹೋದರ-ಸಹೋದರರು ನಂತರ ಪ್ರಜಾಪಿತ ಬ್ರಹ್ಮಾನ ಮಕ್ಕಳಾಗುವುದರಿಂದ ಸಹೋದರ-ಸಹೋದರಿಯರಾಗುತ್ತೇವೆ. ನಂತರ ದೈವೀಕುಲದಲ್ಲಿ ಹೋಗುತ್ತೇವೆಂದರೆ ಸಂಬಂಧವು ವೃದ್ಧಿಯಾಗುತ್ತಾ ಹೋಗುತ್ತದೆ. ರಾಜ್ಯ ಕೌರವರದೂ ಇಲ್ಲ, ಪಾಂಡವರದೂ ಇಲ್ಲ. ಯಾವಾಗ ನಂಬರ್ವಾರ್ ಆಗಿ ರಾಜಾ-ರಾಣಿ ಗದ್ದುಗೆಯ ಮೇಲೆ ಕುಳಿತುಕೊಳ್ಳುತ್ತಾರೆಯೋ ಆಗ ರಾಜಧಾನಿ ಪ್ರಾರಂಭವಾಗುತ್ತದೆ. ಈಗ ಪ್ರಜೆಗಳ ಮೇಲೆ ಪ್ರಜೆಗಳ ರಾಜ್ಯವಿದೆ. ಪ್ರಾರಂಭದಿಂದ ಹಿಡಿದು ಪವಿತ್ರರಾಜ್ಯ ಮತ್ತು ಅಪವಿತ್ರರಾಜ್ಯ ನಡೆಯುತ್ತಾ ಬಂದಿದೆ. ದೇವತೆಗಳದೇ ಪವಿತ್ರರಾಜ್ಯವಿತ್ತು. ಮಕ್ಕಳಿಗೆ ಗೊತ್ತಿದೆ- 5000 ವರ್ಷಗಳ ಮೊದಲು ಸ್ವರ್ಗವಿತ್ತು. ಪವಿತ್ರವಾದ ರಾಜ್ಯವಿತ್ತು ಎಂದು. ಅವರ ಚಿತ್ರವೂ ಸಹ ಇದೆಯಲ್ಲವೆ, ಮಂದಿರವೂ ಸಹ ಎಷ್ಟು ವಿಶಾಲವಾಗಿ ಮಾಡುತ್ತಾರೆ. ಬೇರೆ ಯಾರ ಮಂದಿರವೂ ಸಹ ಇಲ್ಲ. ಈ ದೇವತೆಗಳದೇ ಬಹಳ ಮಂದಿರವಿದೆ.

ತಂದೆಯು ಮಕ್ಕಳಿಗೆ ತಿಳಿಸಿದ್ದಾರೆ- ಎಲ್ಲರ ಶರೀರದ ಹೆಸರುಗಳು ಪರಿವರ್ತನೆಯಾಗುತ್ತದೆ. ಆದರೆ ತಂದೆಯ ಹೆಸರು ಶಿವ ಎಂದೇ ನಡೆಯುತ್ತಾ ಬಂದಿದೆ. ಶಿವಭಗವಾನುವಾಚ, ಯಾವುದೇ ದೇಹಧಾರಿಯನ್ನು ಭಗವಂತನೆಂದು ಹೇಳಲು ಸಾಧ್ಯವಿಲ್ಲ. ತಂದೆಯ ವಿನಃ ಮತ್ತ್ಯಾರೂ ತಂದೆಯ ಪರಿಚಯವನ್ನು ಕೊಡಲು ಸಾಧ್ಯವಿಲ್ಲವೆಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಅವರು ಯಾರೂ ತಂದೆಯನ್ನು ತಿಳಿದುಕೊಂಡಿಲ್ಲ. ಇಲ್ಲಿಯೂ ಸಹ ತಂದೆಯನ್ನು ಹೇಗೆ ನೆನಪು ಮಾಡುವುದು ಎಂಬುದು ಬುದ್ಧಿಯಲ್ಲಿ ಬರದೇ ಇರುವವರು ಬಹಳಷ್ಟು ಮಂದಿ ಇದ್ದಾರೆ, ಗೊಂದಲವಾಗುತ್ತಾರೆ. ಇಷ್ಟು ಚಿಕ್ಕಬಿಂದುವನ್ನು ಹೇಗೆ ನೆನಪು ಮಾಡುವುದು, ಶರೀರವಂತೂ ದೊಡ್ಡದಾಗಿದೆ, ಅದನ್ನೇ ನೆನಪು ಮಾಡುತ್ತಾ ಇರುತ್ತಾರೆ. ಇದೂ ಸಹ ಗಾಯನವಿದೆ- ಭೃಕುಟಿಯ ಮಧ್ಯದಲ್ಲಿ ಹೊಳೆಯುವಂತಹ ನಕ್ಷತ್ರವಿದೆ ಅರ್ಥಾತ್ ಆತ್ಮವು ನಕ್ಷತ್ರದ ಸಮಾನವಾಗಿದೆ. ಆತ್ಮವನ್ನೇ ಸಾಲಿಗ್ರಾಮ ಎಂದು ಹೇಳಲಾಗುತ್ತದೆ. ಶಿವಲಿಂಗವನ್ನೂ ಸಹ ದೊಡ್ಡ ರೂಪದಲ್ಲಿ ಪೂಜೆಯನ್ನು ಮಾಡುತ್ತಾರೆ. ಹೇಗೆ ಆತ್ಮನನ್ನು ನೋಡಲು ಸಾಧ್ಯವಿಲ್ಲ. ಶಿವತಂದೆಯನ್ನೂ ಸಹ ನೋಡುವುದಕ್ಕೆ ಆಗುವುದಿಲ್ಲ. ಭಕ್ತಿಮಾರ್ಗದಲ್ಲಿ ಬಿಂದುವಿನ ಪೂಜೆ ಹೇಗೆ ಮಾಡುವುದು ಏಕೆಂದರೆ ಮೊಟ್ಟಮೊದಲು ಶಿವತಂದೆಯ ಅವ್ಯಭಿಚಾರಿ ಪೂಜೆಯು ಪ್ರಾರಂಭವಾಗುತ್ತದೆ ಹಾಗಾದರೆ ಪೂಜೆಗೆ ಅವಶ್ಯವಾಗಿ ದೊಡ್ಡ ವಸ್ತು ಬೇಕಾಗುತ್ತದೆ. ಸಾಲಿಗ್ರಾಮವೂ ಸಹ ದೊಡ್ಡ ಮೊಟ್ಟೆಯಾಕಾರದಲ್ಲಿ ಮಾಡುತ್ತಾರೆ. ಒಂದುಕಡೆ ಅಂಗುಷ್ಠಾಕಾರವೆಂದು ಉದಾಹರಣೆಯನ್ನು ಕೊಡುತ್ತಾರೆ ಮತ್ತು ನಕ್ಷತ್ರವೆಂದೂ ಸಹ ಹೇಳುತ್ತಾರೆ. ಈಗ ನೀವು ಒಂದು ಮಾತಿನ ಮೇಲೆ ಇರಬೇಕು. ಅರ್ಧಕಲ್ಪ ದೊಡ್ಡ ವಸ್ತುಗಳನ್ನು ಪೂಜೆ ಮಾಡಿದ್ದಿರಿ. ಈಗ ಮತ್ತೆ ಬಿಂದು ಎಂದು ಅರ್ಥ ಮಾಡಿಕೊಳ್ಳುವುದರಲ್ಲಿ ಪರಿಶ್ರಮವಿದೆ. ಬಿಂದು ತಂದೆಯನ್ನು ನೋಡಲು ಸಾಧ್ಯವಿಲ್ಲ. ಇಲ್ಲಿ ಬುದ್ಧಿಯಿಂದ ಅರ್ಥ ಮಾಡಿಕೊಳ್ಳಬೇಕು. ಶರೀರದಲ್ಲಿ ಆತ್ಮದ ಪ್ರವೇಶತೆಯಾಗುತ್ತದೆ ನಂತರ ಹೊರಗೆ ಬಂದಾಗ ಯಾರೂ ನೋಡಲು ಸಾಧ್ಯವಿಲ್ಲ. ದೊಡ್ಡ ವಸ್ತುವಾಗಿದ್ದರೆ ನೋಡಬಹುದು. ತಂದೆಯೂ ಸಹ ಜ್ಯೋತಿಬಿಂದುವಾಗಿದ್ದಾರೆ ಆದರೆ ಅವರು ಜ್ಞಾನಸಾಗರನಾಗಿದ್ದಾರೆ. ಮತ್ತೆ ಇನ್ನ್ಯಾರನ್ನೂ ಜ್ಞಾನಸಾಗರನೆಂದು ಹೇಳಲು ಸಾಧ್ಯವಿಲ್ಲ. ಶಾಸ್ತ್ರವಂತೂ ಭಕ್ತಿಮಾರ್ಗದ್ದಾಗಿದೆ. ಇಷ್ಟೆಲ್ಲಾ ವೇದ-ಶಾಸ್ತ್ರ ಮುಂತಾದವುಗಳನ್ನು ಯಾರು ಮಾಡಿದರು? ಹೇಳುತ್ತಾರೆ, ವ್ಯಾಸ ಮಾಡಿದರು. ಕ್ರಿಸ್ತನ ಆತ್ಮವು ಯಾವುದೇ ಶಾಸ್ತ್ರವನ್ನು ಮಾಡಲಿಲ್ಲ. ಇದೆಲ್ಲವನ್ನೂ ಮನುಷ್ಯರು ಕುಳಿತು ಮಾಡಿದರು. ಜ್ಞಾನವಂತೂ ಅವರಲ್ಲಿ ಇಲ್ಲ. ಜ್ಞಾನಸಾಗರ ಒಬ್ಬ ತಂದೆಯಾಗಿದ್ದಾರೆ. ಶಾಸ್ತ್ರಗಳಲ್ಲಿ ಜ್ಞಾನದ, ಸದ್ಗತಿಯ ಮಾತಂತೂ ಇಲ್ಲವೇ ಇಲ್ಲ. ಪ್ರತಿಯೊಂದು ಧರ್ಮದವರು ತಮ್ಮ-ತಮ್ಮ ಧರ್ಮಸ್ಥಾಪಕರನ್ನು ನೆನಪು ಮಾಡುತ್ತಾರೆ. ದೇಹಧಾರಿಗಳನ್ನೂ ಸಹ ನೆನಪು ಮಾಡುತ್ತಾರೆ. ಕ್ರಿಸ್ತನ ಚಿತ್ರವೂ ಸಹ ಇದೆ, ಎಲ್ಲರ ಚಿತ್ರವೂ ಸಹ ಇದೆ. ಶಿವತಂದೆಯಂತೂ ಪರಮಾತ್ಮನಾಗಿದ್ದಾರೆ. ಈಗ ನೀವು ತಿಳಿದುಕೊಂಡಿದ್ದೀರಿ- ಎಲ್ಲಾ ಆತ್ಮರು ಸಹೋದರರಾಗಿದ್ದಾರೆ. ಜ್ಞಾನವನ್ನು ತಿಳಿಸಿ ಸದ್ಗತಿಯನ್ನು ಕೊಡುವ ಜ್ಞಾನ ಸಹೋದರರಲ್ಲಿ ಇರಲು ಸಾಧ್ಯವಿಲ್ಲ. ಸದ್ಗತಿ ಮಾಡುವವರು ಒಬ್ಬ ತಂದೆಯಾಗಿದ್ದಾರೆ. ಈ ಸಮಯದಲ್ಲಿ ಸಹೋದರರೂ ಸಹ ಇದ್ದಾರೆ, ತಂದೆಯೂ ಸಹ ಇದ್ದಾರೆ. ತಂದೆಯು ಬಂದು ಇಡೀ ವಿಶ್ವದ ಆತ್ಮಗಳ ಸದ್ಗತಿಯನ್ನು ಮಾಡುತ್ತಾರೆ. ವಿಶ್ವದ ಸದ್ಗತಿದಾತ ತಂದೆಯು ಒಬ್ಬರೇ ಆಗಿದ್ದಾರೆ. ಶ್ರೀ ಶ್ರೀ 108 ಜಗದ್ಗುರು ಮತ್ತು ವಿಶ್ವದ ಗುರು ಎರಡರದು ಒಂದೇ ಅರ್ಥವಾಗಿದೆ. ಈಗಂತೂ ಆಸುರೀ ರಾಜ್ಯವಾಗಿದೆ. ಸಂಗಮಯುಗದಲ್ಲಿ ತಂದೆಯು ಬಂದು ಈ ಎಲ್ಲ ಮಾತುಗಳ ಅರ್ಥವನ್ನು ತಿಳಿಸುತ್ತಾರೆ.

ನಿಮಗೆ ತಿಳಿದಿದೆ- ಈಗ ಹೊಸಪ್ರಪಂಚದ ಸ್ಥಾಪನೆಯಾಗುತ್ತಿದೆ ಮತ್ತು ಹಳೆಯ ಪ್ರಪಂಚದ ವಿನಾಶವಾಗಲಿದೆ. ಇದನ್ನೂ ತಿಳಿಸಿದ್ದೇನೆ- ಪತಿತ-ಪಾವನ ಒಬ್ಬ ನಿರಾಕಾರ ತಂದೆಯಾಗಿದ್ದಾರೆ. ಯಾವುದೇ ದೇಹಧಾರಿ ಮನುಷ್ಯರು ಪತಿತ-ಪಾವನನಾಗಲು ಸಾಧ್ಯವಿಲ್ಲ. ಪತಿತ-ಪಾವನ ಪರಮಾತ್ಮನು ಒಬ್ಬರೇ ಆಗಿದ್ದಾರೆ. ಒಂದುವೇಳೆ ಪತಿತ-ಪಾವನ ಸೀತಾರಾಮ ಎಂದು ಹೇಳಿದರೂ ಸಹ ತಂದೆಯು ತಿಳಿಸುತ್ತಾರೆ. ಭಕ್ತಿಯ ಫಲವನ್ನು ಕೊಡಲು ಪರಮಾತ್ಮನು ಬರುತ್ತಾರೆ ಅಂದಾಗ ಎಲ್ಲಾ ಸೀತೆಯರು ವಧುವಾಗಿದ್ದಾರೆ ಮತ್ತು ಒಬ್ಬ ರಾಮ ವರನಾಗಿದ್ದಾರೆ. ಅವರೇ ಎಲ್ಲರ ಸದ್ಗತಿಯನ್ನು ಕೊಡುವವರಾಗಿದ್ದಾರೆ. ಈ ಎಲ್ಲಾ ಮಾತುಗಳನ್ನು ತಂದೆಯು ಕುಳಿತು ತಿಳಿಸುತ್ತಾರೆ. ಡ್ರಾಮಾನುಸಾರ ಅವರೇ ಪುನಃ 5000 ವರ್ಷದ ನಂತರ ಈ ವಿಷಯಗಳನ್ನು ತಿಳಿಸುತ್ತಾರೆ. ಈಗ ತಾವೆಲ್ಲಾ ಓದುತ್ತಿದ್ದೀರಿ, ಶಾಲೆಯಲ್ಲಿ ಎಷ್ಟೊಂದು ಓದುತ್ತಾರೆ. ಇದೆಲ್ಲವೂ ಡ್ರಾಮಾದಲ್ಲಿ ನಿಗಧಿಯಾಗಿದೆ. ಯಾವ ಸಮಯದಲ್ಲಿ ಯಾರು ಓದುತ್ತಾರೆ, ಯಾರು ಪಾತ್ರವನ್ನು ಅಭಿನಯಿಸುತ್ತಾರೆ ಅದೇ ಪಾತ್ರವು ಪುನಃ ಕಲ್ಪದ ನಂತರ ಪುನರಾವರ್ತನೆಯಾಗುತ್ತದೆ. 5000 ವರ್ಷಗಳ ನಂತರ ಪುನಃ ಇದೇ ವಿದ್ಯೆಯನ್ನು ಓದುತ್ತೇವೆ. ಇದು ಅನಾದಿ ಮಾಡಲ್ಪಟ್ಟಿರುವ ನಾಟಕವಾಗಿದೆ. ಈ ನಾಟಕದಲ್ಲಿ ಗಳಿಗೆ-ಗಳಿಗೆಗೆ ಹೊಸದು ಕಂಡುಬರುತ್ತದೆ. ಚಕ್ರವಂತೂ ಸುತ್ತುತ್ತಾ ಇರುತ್ತದೆ. ಹೊಸ-ಹೊಸ

ಮಾತುಗಳನ್ನು ನೀವು ನೋಡುತ್ತಾ ಇರುತ್ತೀರಿ. ಈಗ ನಿಮಗೆ ತಿಳಿದಿದೆ- ಇದು 5000 ವರ್ಷಗಳ ಡ್ರಾಮಾ ನಡೆಯುತ್ತಾ ಇರುತ್ತದೆ, ಇದರ ವಿಸ್ತಾರ ಬಹಳಷ್ಟು ಇದೆ. ಮುಖ್ಯ ವಿಷಯಗಳನ್ನು ತಿಳಿಸಲಾಗುತ್ತದೆ. ಮನುಷ್ಯರು ಹೇಳುತ್ತಾರೆ- ಪರಮಾತ್ಮನು ಸರ್ವವ್ಯಾಪಿ ಎಂದು, ತಂದೆಯು ತಿಳಿಸುತ್ತಾರೆ- ನಾನು ಸರ್ವವ್ಯಾಪಿ ಅಲ್ಲ. ತಂದೆಯು ಬಂದು ತನ್ನ ಆದಿ-ಮಧ್ಯ-ಅಂತ್ಯದ ಪರಿಚಯವನ್ನು ಕೊಡುತ್ತಾರೆ. ಈಗ ನಿಮಗೆ ತಿಳಿದಿದೆ- ತಂದೆಯು ಕಲ್ಪ-ಕಲ್ಪ ಬಂದು ಆಸ್ತಿಯನ್ನು ಕೊಡುತ್ತಾರೆ ಎಂದು. ಬ್ರಹ್ಮನ ಮುಖಾಂತರ ಸ್ಥಾಪನೆಯಾಗುತ್ತದೆ ಎಂದು ಗಾಯನವಿದೆ. ಇದರ ತಿಳುವಳಿಕೆ ಬಹಳ ಚೆನ್ನಾಗಿದೆ. ವಿರಾಟ ರೂಪದ ಅರ್ಥವನ್ನೂ ಸಹ ಹೇಳುತ್ತಾರೆ, ಆದರೆ ತಂದೆಯ ವಿನಃ ಯಾರೂ ತಿಳಿಸಲು ಸಾಧ್ಯವಿಲ್ಲ. ಚಿತ್ರಗಳಂತೂ ಅನೇಕ ಇದೆ ಆದರೆ ಅದರ ಯಥಾರ್ಥವನ್ನು ಒಬ್ಬರೂ ಸಹ ತಿಳಿದುಕೊಂಡಿಲ್ಲ. ಶ್ರೇಷ್ಠಾತಿಶ್ರೇಷ್ಠ ಶಿವತಂದೆಯಾಗಿದ್ದಾರೆ, ಅವರ ಚಿತ್ರವೂ ಸಹ ಇದೆ ಆದರೆ ಯಾರೂ ತಿಳಿದುಕೊಂಡಿಲ್ಲ. ಒಳ್ಳೆಯದು- ಸೂಕ್ಷ್ಮವತನದ ಚಿತ್ರವು ಅವಶ್ಯಕತೆಯಿಲ್ಲ. ಇತಿಹಾಸ-ಭೂಗೋಳ ಇಲ್ಲಿಯೇ ತಿಳಿಸಬೇಕಾಗುತ್ತದೆ. ಹೇಗೆ ಬ್ರಹ್ಮಾನ ಶರೀರದಲ್ಲಿ ಕುಳಿತು ತಂದೆಯು ತಿಳಿಸುತ್ತಾರೆ ಹಾಗೆ ಸೂಕ್ಷ್ಮವತನದಲ್ಲಿ ಕರ್ಮಾತೀತ ಶರೀರದಲ್ಲಿ ಕುಳಿತುಕೊಂಡು ಮಕ್ಕಳೊಂದಿಗೆ ಮಾತನಾಡುತ್ತಾರೆ ಅಥವಾ ಮಿಲನ ಮಾಡುತ್ತಾರೆ. ಆದರೆ ಅಲ್ಲಂತೂ ವಿಶ್ವದ ಇತಿಹಾಸ-ಭೂಗೋಲವಿಲ್ಲ. ಇತಿಹಾಸ-ಭೂಗೋಳ ಇಲ್ಲಿಯದೇ ಮಾತಾಗಿದೆ. ಮಕ್ಕಳ ಬುದ್ಧಿಯಲ್ಲಿ ನಾವೇ ಸತ್ಯಯುಗದ ದೇವಿ-ದೇವತೆಗಳಾಗಿದ್ದೇವೆ ಇದಕ್ಕೆ 5000 ವರ್ಷಗಳಾಯಿತೆಂದು ಇದೆಯಲ್ಲವೆ. ಈ ಆದಿಸನಾತನ ದೇವಿ-ದೇವತಾ ಧರ್ಮದ ಸ್ಥಾಪನೆ ಹೇಗಾಯಿತು ಎಂದು ಯಾರೂ ತಿಳಿದುಕೊಂಡಿಲ್ಲ. ಉಳಿದೆಲ್ಲಾ ಧರ್ಮದ ಸ್ಥಾಪನೆಯ ಬಗ್ಗೆ ಎಲ್ಲರೂ ತಿಳಿದುಕೊಂಡಿದ್ದಾರೆ. ಅದರ ಗ್ರಂಥಗಳಿವೆ. ಲಕ್ಷಾಂತರ ವರ್ಷಗಳ ಮಾತಂತೂ ಇರಲು ಸಾಧ್ಯವಿಲ್ಲ. ಲಕ್ಷಾಂತರ ವರ್ಷಗಳ ಮಾತಂತೂ ತಪ್ಪಾಗಿದೆ ಆದರೆ ಮನುಷ್ಯರ ಬುದ್ಧಿ ಸ್ವಲ್ಪವೂ ಕೆಲಸ ಮಾಡುವುದಿಲ್ಲ. ಪ್ರತಿಯೊಂದು ಮಾತನ್ನು ಮಧುರಾತಿ ಮಧುರ ಮಕ್ಕಳೇ, ಚೆನ್ನಾಗಿ ಧಾರಣೆ ಮಾಡಿ ಎಂದು ತಂದೆಯು ತಿಳಿಸುತ್ತಾರೆ. ತಂದೆಯನ್ನು ನೆನಪು ಮಾಡುವುದೇ ಮುಖ್ಯ ಮಾತಾಗಿದೆ. ಇದು ನೆನಪಿನ ರೇಸ್ ಆಗಿದೆ. ಓಟದ ಸ್ಪರ್ಧೆ ಇರುತ್ತದೆಯಲ್ಲವೆ. ಅದರಲ್ಲಿ ಕೆಲವರು ಒಂಟಿಯಾಗಿ ಓಡುತ್ತಾರೆ, ಕೆಲವರು ಜೋಡಿಯನ್ನು ಜೊತೆ ಮಾಡಿಕೊಂಡು ಓಡುತ್ತಾರೆ. ಇಲ್ಲಂತೂ ಯಾವ ಜೋಡಿ ಇದೆಯೋ ಅವರು ಒಟ್ಟಾಗಿ ಓಡುವ ಅಭ್ಯಾಸವನ್ನು ಮಾಡುತ್ತಾರೆ. ಸತ್ಯಯುಗದಲ್ಲಿಯೂ ಸಹ ಈ ರೀತಿ ಜೋಡಿಯಾಗಿಯೇ ಇರಬೇಕೆಂದು ಯೋಚನೆ ಮಾಡುತ್ತಾರೆ. ಭಲೆ ನಾಮ-ರೂಪವಂತೂ ಬದಲಾಗುತ್ತದೆ, ಅದೇ ಶರೀರ ಸಿಗುವುದಿಲ್ಲ. ಶರೀರವಂತೂ ಬದಲಾಗುತ್ತಿರುತ್ತದೆ. ಆತ್ಮವು ಒಂದು ಶರೀರವನ್ನು ಬಿಟ್ಟು ಇನ್ನೊಂದನ್ನು ಪಡೆಯುತ್ತದೆಯೆಂದು ತಿಳಿಯುತ್ತಾರೆ ಆದರೆ ಭವಿಷ್ಯವಂತೂ ಬೇರೆಯಾಗಿರುತ್ತದೆ.ಆದರೆ ಮಕ್ಕಳಿಗೆ ಅದ್ಭುತವೆನಿಸಬೇಕು. ಯಾವ ಭವಿಷ್ಯ, ಯಾವ ಪಾತ್ರ, ಗಳಿಗೆ-ಗಳಿಗೆ ನಡೆದು ಹೋಗಿದೆಯೋ ಆ ಪಾತ್ರವೇ 5000 ವರ್ಷಗಳ ನಂತರ ಅದೇರೀತಿಯಾಗಿ ಪುನರಾವರ್ತನೆಯಾಗುತ್ತದೆ. ಇದೆಷ್ಟು ಅದ್ಭುತವಾದ ನಾಟಕವಾಗಿದೆ. ಮತ್ತೆ ತಂದೆಯ ವಿನಃ ಮತ್ತ್ಯಾರೂ ತಿಳಿಸಲು ಸಾಧ್ಯವಿಲ್ಲ. ನೀವು ತಿಳಿದಿದ್ದೀರಿ- ನಾವೆಲ್ಲರೂ ಪುರುಷಾರ್ಥ ಮಾಡುತ್ತಿದ್ದೇವೆ. ನಂಬರ್ವಾರಂತೂ ಆಗುತ್ತೇವೆ. ಎಲ್ಲರೂ ಕೃಷ್ಣನಂತೂ ಆಗುವುದಿಲ್ಲ. ಭವಿಷ್ಯವಂತೂ ಎಲ್ಲರದೂ ವಿಭಿನ್ನವಾಗಿರುತ್ತದೆ. ಇದೆಷ್ಟು ಅದ್ಭುತವಾದ ನಾಟಕವಾಗಿದೆಯಲ್ಲವೆ. ಒಬ್ಬರ ಲಕ್ಷಣ ಇನ್ನೊಬ್ಬರಿಗೆ ಹೊಂದಿಕೊಳ್ಳುವುದಿಲ್ಲ. ಅದೇ ಆಟ ಅದೇ ರೀತಿಯಾಗಿ ಪುನರಾವರ್ತನೆಯಾಗುತ್ತದೆ. ಈ ಎಲ್ಲಾ ವಿಚಾರಗಳು ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ಹೇಗೆ ಬೇಹದ್ದಿನ ತಂದೆಯು ಬಂದು ನಮಗೆ ಓದಿಸುತ್ತಾರೆ. ಜನ್ಮ-ಜನ್ಮಾಂತರವಂತೂ ಭಕ್ತಿಮಾರ್ಗದ ಶಾಸ್ತ್ರವನ್ನು ಓದುತ್ತಾ ಬಂದೆವು, ಸಾಧು-ಸನ್ಯಾಸಿಗಳ ಕಥೆಗಳನ್ನು ಕೇಳಿದೆವು. ಈಗ ತಂದೆಯು ತಿಳಿಸುತ್ತಾರೆ- ಭಕ್ತಿಯ ಸಮಯವು ಪೂರ್ಣವಾಯಿತು, ಈಗ ಭಕ್ತರಿಗೆ ಭಗವಂತನ ಮೂಲಕ ಭಕ್ತಿಯ ಫಲ ಸಿಗುತ್ತದೆ ಆದರೆ ಭಗವಂತನು ಯಾವಾಗ ಯಾವ ರೂಪದಲ್ಲಿ ಬರುತ್ತಾನೆ ಎಂಬುದನ್ನು ತಿಳಿದುಕೊಂಡಿಲ್ಲ. ಕೆಲವೊಮ್ಮೆ ಹೇಳುತ್ತಾರೆ- ಶಾಸ್ತ್ರವನ್ನು ಓದುವುದರಿಂದ ಭಗವಂತನು ಸಿಗುತ್ತಾರೆಂದು. ಕೆಲವೊಮ್ಮೆ ಹೇಳುತ್ತಾರೆ- ಇಲ್ಲಿಗೆ ಬರುತ್ತಾರೆ, ಶಾಸ್ತ್ರದಿಂದ ಒಂದುವೇಳೆ ಕೆಲಸ ಆಗಿಬಿಡುತ್ತದೆಯೆಂದು ಭಗವಂತನು ಏಕೆ ಬರಬೇಕು. ಶಾಸ್ತ್ರ ಓದುವುದರಿಂದ ಭಗವಂತನು ಸಿಕ್ಕಿಬಿಟ್ಟರೆ ನಂತರ ಭಗವಂತ ಬಂದು ಏನು ಮಾಡುತ್ತಾರೆ? ಅರ್ಧಕಲ್ಪ ನೀವು ಈ ಶಾಸ್ತ್ರಗಳನ್ನು ಓದುತ್ತಾ-ಓದುತ್ತಾ ತಮೋಪ್ರಧಾನರಾಗುತ್ತಲೇ ಬಂದಿದ್ದೀರಿ ಅಂದಮೇಲೆ ಮಕ್ಕಳಿಗೆ ಸೃಷ್ಟಿಯ ಚಕ್ರದ ರಹಸ್ಯವನ್ನು ತಿಳಿಸುತ್ತಾರೆ ಮತ್ತು ದೈವೀ ಚಲನೆಯೂ ಸಹ ಇರಬೇಕಾಗಿದೆ. ಯಾರಿಗೂ ದುಃಖವನ್ನು ಕೊಡಬಾರದು. ಈ ರೀತಿಯಂತೂ ಅಲ್ಲ, ಯಾರಾದರೂ ವಿಷ (ವಿಕಾರ) ಬೇಕೆಂದಾಗ ಕೊಡದಿದ್ದರೆ ಇದು ದುಃಖ ಕೊಟ್ಟಂತೆ ಎಂದು ತಿಳಿಯಬೇಡಿ. ಈ ರೀತಿಯಂತೂ ತಂದೆಯು ಹೇಳುವುದಿಲ್ಲ. ಕೆಲವರು ಈ ರೀತಿ ಬುದ್ಧಿಹೀನರು ಬಂದು ಹೇಳುತ್ತಾರೆ- ಬಾಬಾ ಹೇಳುತ್ತಾರಲ್ಲವೆ, ಯಾರಿಗೂ ದುಃಖ ಕೊಡಬಾರದು ಎಂದು. ಈಗ ಇವರು ವಿಷವನ್ನು ಕೇಳುತ್ತಾರೆಂದರೆ ಅವರಿಗೆ ಕೊಡಬೇಕು, ಇಲ್ಲವೆಂದರೆ ಇದು ದುಃಖ ಕೊಟ್ಟಂತಾಯಿತಲ್ಲವೆ- ಈ ರೀತಿ ತಿಳಿಯುವವರು ಮೂಢಮತಿಗಳೂ ಸಹ ಇರುತ್ತಾರೆ. ತಂದೆಯಂತೂ ಹೇಳುತ್ತಾರೆ- ಪವಿತ್ರರಂತೂ ಅವಶ್ಯವಾಗಿ ಆಗಲೇಬೇಕಾಗಿದೆ. ಆಸುರೀಚಲನೆ ಮತ್ತು ದೈವೀಚಲನೆಯ ತಿಳುವಳಿಕೆಯೂ ಬೇಕಲ್ಲವೆ. ಮನುಷ್ಯರು ಯಾವ ಮಾತನ್ನೂ ತಿಳಿದುಕೊಂಡಿಲ್ಲ, ಅವರು ಆತ್ಮವನ್ನು ನಿರ್ಲೇಪವೆಂದು ಹೇಳಿಬಿಡುತ್ತಾರೆ. ಏನಾದರೂ ಮಾಡಿ, ಏನನ್ನಾದರೂ ತಿನ್ನಿ, ಕುಡಿಯಿರಿ, ವಿಕಾರದಲ್ಲಿ ಹೋಗಿ, ತೊಂದರೆ ಏನೂ ಇಲ್ಲವೆಂದು ಕಲಿಸಿಕೊಡುತ್ತಾರೆ. ಎಷ್ಟೊಂದು ಜನರನ್ನು ಹಿಡಿದು ತರುತ್ತಾರೆ. ಹೊರಗಿನ ಜನರೂ ಸಹ ಬಹಳಷ್ಟು ಜನ ಸಸ್ಯಹಾರಿಗಳೇ ಇರುತ್ತಾರೆ. ಒಳ್ಳೆಯದು ಎಂದು ತಿಳಿದ ಕಾರಣವೇ ಸಸ್ಯಾಹಾರಿಗಳಾಗಿರುತ್ತಾರೆ. ಎಲ್ಲಾ ಜಾತಿಗಳಲ್ಲಿಯೂ ಸಹ ವೈಷ್ಣವರಿರುತ್ತಾರೆ. ಕೊಳಕು ವಸ್ತುಗಳನ್ನು ತಿನ್ನುವುದಿಲ್ಲ. ಅಂತಹವರು ಸ್ವಲ್ಪ ಜನ ಇರುತ್ತಾರೆ. ನೀವೂ ಸಹ ಬಹಳ ಕಡಿಮೆಯಿದ್ದೀರಿ. ಮುಂದೆ ಹೋದಂತೆ ವೃದ್ಧಿಯಾಗುತ್ತದೆ. ಮಕ್ಕಳಿಗೆ

ಸದಾ ದೈವೀಗುಣವನ್ನು ಧಾರಣೆ ಮಾಡಿ ಎಂದು ಶಿಕ್ಷಣ ಸಿಗುತ್ತದೆ. ಅಶುದ್ಧ ಪದಾರ್ಥಗಳನ್ನು ಬೇರೆಯವರ ಕೈಯಿಂದ ತಯಾರಿಸಿದ ಆಹಾರವನ್ನು ತಿನ್ನಬಾರದಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ನಿಮ್ಮ ಚಾರ್ಟ್ನಲ್ಲಿ ನೋಡಿಕೊಳ್ಳಬೇಕಾಗಿದೆ. 1. ನಾವು ಶ್ರೀಮತಕ್ಕೆ ವಿರುದ್ಧವಾಗಿ ನಡೆಯುವುದಿಲ್ಲವೆ? 2. ಸುಳ್ಳನ್ನು ಹೇಳುವುದಿಲ್ಲವೆ? 3. ಯಾರಿಗೂ ತೊಂದರೆ ಕೊಡುವುದಿಲ್ಲವೆ? ದೈವೀಗುಣವನ್ನು ಧಾರಣೆ ಮಾಡಿದ್ದೇವೆಯೇ?

2. ವಿದ್ಯೆಯ ಜೊತೆಜೊತೆಗೆ ದೈವೀಚಲನೆಯನ್ನು ಧಾರಣೆ ಮಾಡಬೇಕಾಗಿದೆ. ಅವಶ್ಯವಾಗಿ ಪವಿತ್ರರಾಗಬೇಕಾಗಿದೆ. ಯಾವ ಕೊಳಕು ವಸ್ತುಗಳನ್ನೂ ತಿನ್ನಬಾರದು, ಸಂಪೂರ್ಣ ವೈಷ್ಣವರಾಗಬೇಕಾಗಿದೆ. ಓಟದ ಸ್ಪರ್ಧೆಯನ್ನು (ರೇಸ್) ಮಾಡಬೇಕಾಗಿದೆ.

ವರದಾನ: ತಂದೆಯ ಆಜ್ಞೆಯಂತೆ ಬುದ್ಧಿಯನ್ನು ಖಾಲಿ ಇಟ್ಟುಕೊಳ್ಳುವಂತಹ ವ್ಯರ್ಥ ಅಥವಾ ವಿಕಾರಿ ಸ್ವಪ್ನಗಳಿಂದ ಮುಕ್ತ ಭವ

ತಂದೆಯ ಆಜ್ಞೆಯಾಗಿದೆ ಮಲಗಿರುವ ಸಮಯದಲ್ಲಿ ಸದಾ ತಮ್ಮ ಬುದ್ಧಿಯನ್ನು ಕ್ಲಿಯರ್ ಮಾಡಿಕೊಳ್ಳಿ, ಇಲ್ಲ ಒಳ್ಳೆಯದು, ಇಲ್ಲ ಕೆಟ್ಟದ್ದು ಎಲ್ಲವನ್ನೂ ತಂದೆಗೆ ಅರ್ಪಿಸಿ ನಿಮ್ಮ ಬುದ್ಧಿಯನ್ನು ಖಾಲಿ ಮಡಿಕೊಳ್ಳಿ. ತಂದೆಗೆ ಕೊಟ್ಟು ತಂದೆಯ ಜೊತೆ ಮಲಗಿಬಿಡಿ. ಒಂಟಿಯಾಗಿ ಬೇಡ. ಒಂಟಿಯಾಗಿ ಮಲಗುವಿರೊ ಇಲ್ಲ ವ್ಯರ್ಥ ಮಾತುಗಳ ವರ್ಣನೆ ಮಾಡುತ್ತಾ-ಮಾಡುತ್ತಾ ಮಲಗುವಿರಿ ಆಗ ವ್ಯರ್ಥ ಅಥವಾ ವಿಕಾರಿ ಸ್ವಪ್ನಗಳು ಬರುವುದು. ಇದೂ ಸಹಾ ಹುಡುಗಾಟಿಕೆಯಾಗಿದೆ. ಈ ಹುಡುಗಾಟಿಕೆಯನ್ನು ಬಿಟ್ಟು ಆಜ್ಞೆಯನುಸಾರ ನಡೆದಾಗ ವ್ಯರ್ಥ ಅಥವಾ ವಿಕಾರಿ ಸ್ವಪ್ನಗಳಿಂದ ಮುಕ್ತರಾಗಿಬಿಡುವಿರಿ.

ಸ್ಲೋಗನ್: ಅದೃಷ್ಟಶಾಲಿ ಆತ್ಮಗಳೇ ಸತ್ಯ ಸೇವೆಯಿಂದ ಸರ್ವರ ಆಶೀರ್ವಾದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ.